JGI


ಶ್ರೀಭಗವಾನ್ ಮಹಾವೀರ್ ಜೈನ್ ಪ್ರಥಮ ದರ್ಜೆ ಕಾಲೇಜು

ರಾಬರ್ಟ್‌ಸನ್‌ಪೇಟೆ, ಗೀತಾ ರಸ್ತೆ, ಕೆ.ಜಿ.ಎಫ್-563122

ನ್ಯಾಕ್‌ನಿಂದ 'ಬಿ' ಮಾನ್ಯತೆಯನ್ನು ಪಡೆದಿದೆ


ವಿಚಾರ ಸಂಕಿರಣದಲ್ಲಿ ಮಂಡಿಸಿದ ಲೇಖನಗಳ ಸಂಕಲನ

ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ

ಶುಕ್ರವಾರ, 22 ಫೆಬ್ರವರಿ, 2019

# ಹೊಸಗನ್ನಡ ಸಾಹಿತ್ಯದ ಪ್ರೇರಣೆ, ಪ್ರಭಾವ ಮತ್ತು ವೈವಿಧ್ಯತೆಗಳು


ಕನ್ನಡ ವಿಭಾಗ

ಶ್ರೀಭಗವಾನ್ ಮಹಾವೀರ್ ಜೈನ್ ಪ್ರಥಮ ದರ್ಜೆ ಕಾಲೇಜು

ರಾಬರ್ಟ್‌ಸನ್‌ಪೇಟೆ, ಗೀತಾ ರಸ್ತೆ,

ಕೆ.ಜಿ.ಎಫ್-563122

**One Day National Conference**
**ವಿಷಯ: ಹೊಸಗನ್ನಡ ಸಾಹಿತ್ಯದ ಪ್ರೇರಣೆ, ಪ್ರಭಾವ ಮತ್ತು ವೈವಿಧ್ಯತೆಗಳು**

**Topic: HOSAGANNADA SAHITYADA PRERANE, PRABHAVA MATTU VAIVIDHYATEGALU**

**© Department of Kannada, Sri Bhagawan Mahaveer Jain First Grade College**

**ISBN: 978-93-88398-98-5**

**First Edition: 2019**

All rights reserved. No part of this book may be reproduced, stored in a retrieval system or transmitted, in any form or by any means, mechanical, photo copying, recording or otherwise, without prior written permission of the author or publisher.

***Publisher***
**SHANLAX** PUBLICATIONS
61, 66 T.P.K. Main Road
Vasantha Nagar
Madurai – 625003
Tamil Nadu, India

*Ph: 0452-4208765,*
*Mobile: 7639303383*
*email:publisher@shanlaxpublications.com*
*web: www.shanlaxpublications.com*

# ಪರಿವಿಡಿ


i ಆಶಯ ಭಾಷಣ – ಡಾ. ಬೈರಮಂಗಲ ರಾಮೇಗೌಡ

1 ಹೊಸಗನ್ನಡ ಸಾಹಿತ್ಯದ ಆತ್ಮಕಥನಗಳಲ್ಲಿ: ಶೋಷಣೆಯ ಅಭಿವಕ್ತಿ ನಿರೂಪಣೆ – ಡಾ. ತಾ. ಮ. ನಾಗಾರ್ಜುನ 1

2 ಹೊಸಗನ್ನಡ ಸಾಹಿತ್ಯದ ಮೇಲೆ ಲಾವಣಿಗಳ ಆಳುವ ಸಂಸ್ಕೃತಿಯ ಪ್ರಭಾವ – ಪ್ರೊ. ವಸಂತಕುಮಾರ ಟಿ 4

3 ಕಥಾ ಸಾಹಿತ್ಯದಲ್ಲಿ ಮಹಿಳಾ ಹೆಜ್ಜೆಗಳು: 1.ಚೇತನಾ ಹೆಗಡೆ 2.ಡಾ. ಗೀತಾ ವಸಂತ್ 6

4 ಕನ್ನಡದಲ್ಲಿ ಪತ್ರ ಸಾಹಿತ್ಯ – ಪ್ರೇರಣೆ ಪ್ರಭಾವ ಮತ್ತು ವೈವಿಧ್ಯತೆಗಳು – ವೇಣುಗೋಪಾಲ ಶೆಟ್ಟಿ 14

5 ಹೊಸಗನ್ನಡ ಅನುವಾದ ಸಾಹಿತ್ಯ: ವಸಾಹತುಶಾಹಿ ನೆಲೆಗಟ್ಟು – ಸುಧಾರಾಣಿ ಕಿನ್ನಿಗೋಳಿ 19

6 ಹೊಸಗನ್ನಡ ಸಾಹಿತ್ಯದಲ್ಲಿ ಮಹಿಳಾ ಕಾವ್ಯದ ಅಭಿವ್ಯಕ್ತಿ – ಇಂದಿರಾ 23

7 ಹೊಸಗನ್ನಡ ಪ್ರಗತಿಶೀಲ ಸಾಹಿತ್ಯದ ಪ್ರೇರಣೆ–ಧೋರಣೆಗಳು – ಡಾ. ವನಜಾಕ್ಷಿ ಆರ್.ಹಳ್ಳಿಯವರ 27

8 ಹೊಸಗನ್ನಡ ಸಾಹಿತ್ಯದ ಹರಿಕಾರ ಬೇಂದ್ರೆ – ಡಾ. ನಳಿನ ಎನ್ 30

9 ದಲಿತ ಕಥೆಗಳಲ್ಲಿ ಅಧ್ಯಾತ್ಮದ ಭಿನ್ನರೂಪ – ಪ್ರೊ. ಪ್ರಮೀಳ 33

10 ಹೊಸಗನ್ನಡ ಕಾವ್ಯದ ಕವಿರಾಜಮಾರ್ಗಕಾರ–ಬಿ.ಎಂ.ಶ್ರೀ – ಡಾ. ಚೈತಾಲಿ 36

11 ಭಾಷಾಂತರ ಮತ್ತು ಆಧುನಿಕ ಕನ್ನಡ ಸಾಹಿತ್ಯ–ಡಾ. ವಿಜಯೇಂದ್ರ ಕುಮಾರ್ ಜಿ. ಎಲ್ 38

12 ಹೊಸಗನ್ನಡ ಕಾವ್ಯ ಸಾಹಿತ್ಯದಲ್ಲಿ ಪಾಶ್ಚಾತ್ಯ ಕಾವ್ಯ ಶೈಲಿ (ಛಂದಸ್ಸು) – ಶಿವಕುಮಾರ್ ಎನ್ 42

13 ಹೊಸಗನ್ನಡ ಸಣ್ಣಕಥಾ ಸಾಹಿತ್ಯದ ಪ್ರೇರಣೆ, ಪ್ರಭಾವ ಮತ್ತು ವೈವಿಧ್ಯತೆ –ಸುಕನ್ಯ ಟಿ. ಎಲ್ 45

14 ಕನ್ನಡ ಸಾಹಿತ್ಯದ ಪುನರುಜ್ಜೀವನಕ್ಕೆ ನಾಂದಿ ಹಾಡಿದ ನವೋದಯ – ಡಾ. ಸೌಭಾಗ್ಯ ಕೆ 49

15 ಹೊಸಗನ್ನಡ ನಾಟಕ ಸಾಹಿತ್ಯ ಸಂವೇದನೆಯ ವೈವಿಧ್ಯತೆ – ಡಾ. ರೇಣುಕಪ್ರಸಾದ್ ಬಿ. ಆರ್ 52

16 ಹೊಸಗನ್ನಡ ಕಾವ್ಯ ಸಂಸ್ಕೃತಿಯ ವ್ಯಾಖ್ಯಾನ – ಡಾ. ಜಲಜಾಕ್ಷಿ ಸಿ 55

17 ಸಣ್ಣಕತೆಂಉ ಉಗಮ – ಅನುವಾದದ ಪ್ರೇರಣೆ – ಡಾ. ಸವಿತ ವಿ 58

18 ಹೊಸಗನ್ನಡ ಕಾದಂಬರಿ ಸಾಹಿತ್ಯದ ಪ್ರೇರಣೆ, ಪ್ರಭಾವ ಮತ್ತು ವೈವಿಧ್ಯತೆ – ಡಾ. ಎಂ. ಚಿಕ್ಕಣ್ಣ 64

19 ನವೋದಯ ಕಾಲದ ವೈಚಾರಿಕ ಸಾಹಿತ್ಯದ ಸ್ವರೂಪ: ಒಂದು ಅವಲೋಕನ – ಡಾ. ರಾಮಯ್ಯ 70

20 ಹೊಸಗನ್ನಡ ಸಣ್ಣಕಥೆಗಳ ಮೇಲೆ ಪ್ರೇರಣೆ, ಪ್ರಭಾವ ಮತ್ತು ವೈವಿಧ್ಯತೆ – ಪಾರ್ವತಿ ಎಂ 77

21 ನವೋದಂಉ ಕವಿಗಳ ರಾಷ್ಟ್ರೀಂಉತೆ ಮತ್ತು ಕನ್ನಡಪ್ರಜ್ಞೆ – ಡಾ. ಗಿರಿಜಾಂಬ ಕೆ. ಎನ್ 79

22 ಹೊಸಗನ್ನಡ ಸಣ್ಣಕಥಾ ಸಾಹಿತ್ಯದ ಪ್ರೇರಣೆ, ಪ್ರಭಾವ ಮತ್ತು ವೈವಿಧ್ಯತೆ – ಡಾ. ಗೀತಾಂಜಲಿ ಎಂ ಕುರಡಗಿ 81

23 ಹೊಸಗನ್ನಡ ಕಾದಂಬರಿ ಸಾಹಿತ್ಯದ ಪ್ರೇರಣೆ ಪ್ರಭಾವ ಮತ್ತು ವೈವಿಧ್ಯತೆ – ಡಾ. ಮಹೇಶ ಫ ಗಾಜಪ್ಪನವರ 86

## ಸಣ್ಣಕತೆಯ ಉಗಮ – ಅನುವಾದದ ಪ್ರೇರಣೆ

ಡಾ. ಸವಿತ ವಿ, ಸಹಾಯಕ ಪ್ರಾಧ್ಯಾಪಕರು, ನ್ಯಾಷನಲ್ ಕಾಲೇಜು, ಜಯನಗರ, ಬೆಂಗಳೂರು

ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ಹುಟ್ಟಿಕೊಂಡ ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ 'ಸಣ್ಣಕತೆ' ಕೂಡ ಒಂದು. ಕ ಅನ್ನುವ ಪ್ರಕಾರವು ಕನ್ನಡಕ್ಕೆ ಹೊಸತಲ್ಲ. ಕನ್ನಡದ ಮೊದಲ ಉಪಲಬ್ಧ ಸಾಹಿತ್ಯ ಕೃತಿ 'ವಡ್ಡಾರಾಧನೆ' ಯುದ್ಧ ವಿಚಾರಗಳನ್ನು ತಿಳಿಸುವ ಒಂದು ಕಥಾಗುಚ್ಛ. 10ನೇ ಶತಮಾನದಲ್ಲಿ ದುರ್ಗಸಿಂಹನಿಂದ ರಚಿತವಾದ 'ಪಂಚತಂತ್ರ' ಒಂದು ನೀತಿಬೋಧಕ ಕಥಾ ಸಂಕಲನ. ಇದಲ್ಲದೆ ಜನಪದ ಸಾಹಿತ್ಯದಲ್ಲಿ ಸಿಗುವ ಸಮೃದ್ಧವಾದ ಕಥೆಗಳ ಅಜ್ಜಿಕಥೆಗಳು ಕನ್ನಡದಲ್ಲಿ ಇವೆ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕಥಾ ಸಾಹಿತ್ಯಕ್ಕೆ ತನ್ನದೇ ಆದ ಪ್ರಾಚೀನತೆಯನ್ನು ಕಾಣಬಹುದು. ಪೈಶಾಚಿ ಭಾಷೆಯಲ್ಲಿ ರಚಿತವಾದ ಗುಣಾಢ್ಯನ 'ಬೃಹತ್ಕಥಾ ಕೋಶ'ವು ದೊಡ್ಡ ಕಥಾಗುಚ್ಛ. ಸಂಸ್ಕೃತದ 'ಕಥಾಸರಿತ್ಸಾಗರ' ಮತ್ತು 'ಹಿತೋಪದೇಶ'ದ ಕಥೆಗಳು ಭಾರತೀಯ ಪರಿಸರದಲ್ಲೇ ಹುಟ್ಟಿಕೊಂಡಂತಹ ನೀತಿಕಥೆಗಳೇ ಆಗಿವೆ. ಕವಿರಾಜಮಾರ್ಗಕಾರನು 'ಗದ್ಯಕಥಾ' ಎಂಬ ಪ್ರಕಾರ ಇತ್ತೆಂಬುದನ್ನು ಹೇಳುತ್ತಾನೆ. ಇದಷ್ಟೇ ಅಲ್ಲದೆ 'ಮಹಾಭಾರತ' ಮತ್ತು 'ರಾಮಾಯಣ'ಗಳೂ ಬೃಹತ್ ಕಥಾಕೋಶವೇ ಆಗಿದೆ. ಪಂಪನು ಕಾವ್ಯ ರಚನೆಯ ಕುರಿತು 'ಕಥೆಯ ಮೆಯ್ಗಡಲೀಯದೆ' ಎಂದರೆ ಕುಮಾರವ್ಯಾಸನು 'ತಿಳಿಯ ಹೇಳುವೆ ಕೃಷ್ಣ ಕಥೆಯ ಇಳೆಯ ಜಾಣರು ಮೆಚ್ಚುವಂತೆ' ಎಂದು ಹೇಳಿದ್ದಾನೆ. ಮಳೆಗಾಲದ ಬೇಸರಿಕೆಯನ್ನು ಕಳೆಯುವುದಕ್ಕಾಗಿ ನಲ್ಲತೆಯೊಂದನ್ನು ಹೇಳೆಂದು ಮುದ್ದಣ ಮನೋರಮೆ ಕೇಳಿದಾಗ ರಾಮಾಶ್ವಮೇಧದ ಕಥೆಯನ್ನು ಹೇಳುತ್ತಾನೆ. ಒಟ್ಟಾರೆ ಭಾರತೀಯ ಪರಿಸರದಲ್ಲಿ ಕಥೆ ಹೇಳುವ ಕ್ರಿಯೆ ಪುರಾತನವಾದುದು.

ಆದರೆ ಇಂಥಹ ಕಥೆಗಳಿಗೆ ಭಿನ್ನವಾದ ಮಾದರಿಯೊಂದು19ನೇ ಶತಮಾನದ ಕೊನೆಯ ಭಾಗದಲ್ಲಿ ಕಾಣಿಸಿಕೊಂಡಿತು. ಇಂಗ್ಲಿಷ್‌ನ 'short story'ಯ ಲಕ್ಷಣವುಳ್ಳ ಸಣ್ಣಕಥೆಯೇ ಆ ಹೊಸ ಮಾದರಿ.ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಆದ ಸ್ವಅನುಭವ ಹಾಗೂ ಪರಾನುಭವವನ್ನು ಸರಳವಾಗಿ ಕೆಲವೇ ಸಾಲುಗಳಲ್ಲಿ ಹೇಳಲು ಸಾಧ್ಯವಾಗುವಂತಹ ಸಾಹಿತ್ಯ ಮಾಧ್ಯಮದ ಬರುವಿಕೆ 19ನೇ ಶತಮಾನದ ತುಡಿತಗಳಲ್ಲಿ ಒಂದು. ಗದ್ಯ ಮಾದರಿಗಳಲ್ಲಿ ಕಾದಂಬರಿ ಪ್ರಕಾರವು ಹೆಚ್ಚು ಮಾನ್ಯತೆಯನ್ನು ಸ್ಥಾಪಿಸುತ್ತಿತ್ತು. ಇಂತಹ ಸಂದರ್ಭದಲ್ಲೇ ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಬಹಳ ವಿಶಿಷ್ಟವಾದ ಪ್ರಕಾರವಾದ ಸಣ್ಣಕಥೆ ತನ್ನ ಸ್ಥಾನವನ್ನು ಪಡೆಯಿತು. ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಹುಟ್ಟಿಕೊಂಡ ಹೊಸ ಪ್ರಕಾರಗಳನ್ನು ಸ್ವೀಕರಿಸುವ ಮತ್ತು ನಿರಾಕರಿಸುವ ವಿಚಾರದಲ್ಲಿ ಆದರ ಭಾಷೆ ಶೈಲಿ ಕುರಿತಂತೆ ಅನೇಕರು ತಮ್ಮದೇ ಆದ ಸಮರ್ಥನೆ ಇಲ್ಲವೆ ಟೀಕೆಗಳನ್ನು ನೀಡಿದ್ದಾರೆ. ಇಂತಹ ಗೊಂದಲಗಳಿಂದ ಮುಕ್ತವಾದ ಒಂದು ನವೀನ ಪ್ರಕಾರವೇ ಸಣ್ಣಕಥೆ.

ಇದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ರೂಪಿತವಾದುದ್ದಾದರೂ ಇಲ್ಲಿನ ಸತ್ವಗಳನ್ನು ಮೈಗೂಡಿಸಿಕೊಂಡ ಸ್ವತಂತ್ರವಾದ ಸಾಹಿತ್ಯ ಪ್ರಕಾರವೆಂಬಂತೆ ರಚನೆಯಾಗಿದೆ. ಇಂತಹದೊಂದು ಪ್ರಕಾರದ ಅವಶ್ಯಕತೆ ಕನ್ನಡ ಪರಿಸರಕ್ಕೆ ಅಗತ್ಯವಾಗಿತ್ತು. ಇದಕ್ಕೆ ಕಾರಣಗಳೆಂದರೆ ದೀರ್ಘವಾದ ಕಾದಂಬರಿ, ನಾಟಕ ಪ್ರಕಾರಗಳು. ಇಲ್ಲವೆ ವೈಯಕ್ತಿಕ ನೆಲೆಯಿಂದ ದೂರವಿದ್ದ ಕಾವ್ಯ ಪ್ರಕಾರ. ಸಣ್ಣಕಥೆ ಹಾಗೂ ಕಾದಂಬರಿಗಳ ನಡುವೆ ಸಾಮ್ಯತೆ ಇದೆಯಾದರೂ ಮತ್ತು ವೈಯಕ್ತಿಕ ವಿಚಾರಗಳನ್ನು ಅನಾವರಣಗೊಳಿಸುವ ಸಾಧನವಾಗಿದ್ದರೂ ಸಣ್ಣಕಥೆಗಿರುವ ನಿರ್ದಿಷ್ಟತೆ, ನಿರೂಪಣೆಯ ವಿಧಾನವು ತೀರಾ ಸಾಮಾನ್ಯರಿಗೂ ಪ್ರಿಯವಾದುದು. ಆದ್ದರಿಂದಲೇ 19ನೇ ಶತಮಾನದಲ್ಲಿ ದೊರೆತ ಅನೇಕ ಹೊಸ ಮಾದರಿಗಳಲ್ಲಿ ಸಣ್ಣಕಥೆಯು ಹುಲುಸಾಗಿ ಬೆಳೆಯಿತು.

ಕನ್ನಡದಲ್ಲಿ ರಚನೆಯಾದ ಸಣ್ಣಕಥೆಗಳ ಸ್ವರೂಪಕ್ಕೂ ಪಾಶ್ಚಾತ್ಯ ಸಣ್ಣಕಥೆಗಳ ಸ್ವರೂಪಕ್ಕೂ ಬಹಳ ವ್ಯತ್ಯಾಸವಿದೆ. ಇಂಗ್ಲಿಷ್‌ನಲ್ಲಿ ಐದಾರು ಸಾಲಿನ ಕಥೆಗಳಿಂದ ಹಿಡಿದು ಹೆಚ್ಚೆಂದರೆ ಮೂರರಿಂದ ನಾಲ್ಕು ಪುಟಗಳ ಕಥೆಗಳು ಈ ವ್ಯಾಪ್ತಿಗೆ ಬರುತ್ತದೆ. ಆದರೆ ಕನ್ನಡದ ಸಣ್ಣಕಥೆಗಳ ಲಕ್ಷಣ ಕುರಿತಂತೆ ಆಗಿನ ಪತ್ರಿಕೆಯೊಂದರಲ್ಲಿ ಹೀಗೆ ಹೇಳಿದ್ದಾರೆ "ಪುಟ, ಪರಿಮಿತಿ, ಓದುವುದಕ್ಕೆ ಹಿಡಿಯುವ ಕಾಲ ಮುಂತಾದವುಗಳ ಮೇಲೆ ಕತೆಗಳ ಅಂತಸ್ತನ್ನು ನಿರ್ಧರಿಸುತ್ತಾರೆ. ಅಂದರೆ 20–30 ಪುಟವಿದ್ದರೆ ಸಣ್ಣಕತೆ, 50ರವರೆಗಾದರೆ ನೀಳ್ಗತೆ, 70 ಪುಟವಿದ್ದರೆ ಕಾದಂಬರಿ, ನೂರಕ್ಕೆ ಮೀರಿದರೆ ದೊಡ್ಡ ಕಾದಂಬರಿಯೆಂದು ಸಾಮಾನ್ಯವಾಗಿ ಭಾವಿಸುವುದು ತಪ್ಪಾಗುತ್ತದೆ. ಆಕಾರದೆಡೆ ಗಮನವಿಡುವುದು ಮುಖ್ಯವಾದರೂ ಅದೊಂದೇ ಪ್ರಧಾನವಲ್ಲ. ಕಾದಂಬರಿಯು ಪಾತ್ರಗಳ ರಚನೆಯಲ್ಲಿ ಪ್ರಮುಖ ಪಾತ್ರವಹಿಸುವಂತೆಯೇ ಸಣ್ಣಕತೆಗಳು ಏಕಕೇಂದ್ರವಾದ ಸನ್ನಿವೇಶ ನಿರೂಪಣೆಯಲ್ಲಿ ಆಸಕ್ತಿವಹಿಸುತ್ತದೆ." (ಕನ್ನಡ ನುಡಿ ಪತ್ರಿಕೆ-ಆಗಸ್ಟ್ 13, 1948) ಎಂದಿದ್ದಾರೆ. ಇಂತಹ ಸೀಮಿತ ವ್ಯಾಪ್ತಿಯನ್ನು ಹೊಂದಿದ್ದರಿಂದಲೇ ಈ ಪ್ರಕಾರವು ಹೆಚ್ಚು ಮಾನ್ಯತೆಯನ್ನು ಪಡೆಯಿತು.